ಪ್ರಶ್ನೆಯನ್ನ ಹಾಕಿಕೊಳ್ಳಲೇಬೇಕು. ವಿಮರ್ಶಕ ಒಂದು ಕೃತಿಯನ್ನ ಅಪ್ರೋಚ್ ಮಾಡ್ತಾ ಇರುವಾಗ ತನ್ನ ಪರಿಕರಗಳನ್ನ ಮರುಪರೀಕ್ಷೆಗೆ ಒಳಪಡಿಸಿಕೊಳ್ಳುವ ರೀತಿಯಲ್ಲಿ ಇರ್ಲೇಬೇಕು. ಕೃತಿಯಿಂದ ತನ್ನ ನೋಟಗಳಲ್ಲಿ ಏರುಪೇರಾದರೆ ಅದೇನು ಅಂತ ಪರಿಶೀಲಿಸಿಕೊಳ್ಳಬೇಕು. ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಬಗ್ಗೆ ಬಂದ ಅನೇಕ ಲೇಖನಗಳು ನನ್ನ ಕಣ್ಣೆದುರಿದ್ದವು. ಅನೇಕರಿಗೆ ರಾಮಾಯಣದರ್ಶನಂ ಕಾವ್ಯದ ಸಾಲುಗಳನ್ನು ವ್ಯವಧಾನದಿಂದ ಓದಬೇಕು ಅಂತ ಕೂಡ ಅನ್ನಿಸಲಿಲ್ಲ. ಅನೇಕರು ಸಾಲುಗಳನ್ನು ತಪ್ಪಾಗಿ ಓದಿದ್ದಾರೆ, ಕುರ್ತಕೋಟಿ ಅವರನ್ನು ಒಳಗೊಂಡು. ಕುವೆಂಪು ಅವರನ್ನು ಟೀಕಿಸಬೇಕು ಅನ್ನುವ ಭರದಲ್ಲಿ. ಇದರರ್ಥ, ಕುವೆಂಪು ಅವರು ಟೀಕೆಗೆ ಅತೀತರು ಅಂತ ನಾನು ಹೇಳ್ತಾ ಇಲ್ಲ. ಆದ್ರೆ ಅದಕ್ಕಿರುವ ಕಾರಣಗಳನ್ನು ಪಠ್ಯದಲ್ಲಿ ಸರಿಯಾಗಿ ಗುರುತಿಸಬೇಕು ತಾನೆ? ಅನೇಕರ ಬೆನ್ನುಡಿಗಳನ್ನು ನೋಡಿದರೆ ಅವರು ಆ ಕೃತಿಗಳನ್ನ ಓದಿದ್ದಾರೆ ಅಂತಲೇ ಅನ್ನಿಸುವುದಿಲ್ಲ. ಒಂದು ಇಪ್ಪತ್ತೈದು ಗುಣವಾಚಕಗಳು ಗೊತ್ತಿರುವ ಯಾರು ಬೇಕಾದರೂ ಬೆನ್ನುಡಿ ಬರೀಬಹುದು ಅಂತಾಗಿದೆ. ಅಂದ್ರೆ ಒಂದು ಕೃತಿ ನಿಮ್ಮನ್ನು ಬುಡಮಟ್ಟದಿಂದ ಅಲುಗಿಸದೆ ಹೋದರೆ ಅದನ್ನ ಒಳಗೆ ತೆಗೆದುಕೊಳ್ಳೋಕೆ ಆಗೋದಿಲ್ಲ. ಎಚ್.ಎಸ್. ಅನುಪಮಾ ಅವರ 'ನಾನು... ಕಸ್ತೂರ್' ಕೃತಿಯನ್ನು ಓದಿದಾಗ ಅವರಿಗೆ ನಾನಿದನ್ನೇ ಹೇಳಿದೆ. ಅವರು ಆಗ 'ಕುವೆಂಪು ಭಾಷಾ ಭಾರತಿ'ಯ ಸದಸ್ಯರಾಗಿದ್ರು, ಪರಿಚಿತರಾಗಿದ್ರು. 'ನೀವು ಅದನ್ನು ನರೇಟ್ ಮಾಡಲು ತೆಗೆದುಕೊಂಡ ವಿಧಾನ ಏನಿದೆ, ಆ ವಿಧಾನದಲ್ಲೇ ಮೂಲಭೂತವಾಗಿ ತಪ್ಪಿದೆ, ಆ ರೀತಿ ತಗೋಬಾರದಾಗಿತ್ತು' ಅಂತ ಹೇಳಿದೆ. ಫಸ್ಟ್ ಪರ್ಸನ್ ನರೇಶನ್ ಯಾವಾಗಲೂ ಕೂಡ ಅಪಾಯಕಾರಿ. ಅದರಲ್ಲೂ ಒಂದು ಚಾರಿತ್ರಿಕವಾದ ಪಾತ್ರವನ್ನು ಹೇಳೋಕೆ ಹೊರಟಾಗ ಎಡವೋ ಸಾಧ್ಯತೆಗಳು ತುಂಬಾ ಇರ್ತವೆ. ಅವರು ತಮ್ಮ ಕೃತಿಯಲ್ಲಿ ಎಡವಿದ್ದಾರೆ ಕೂಡ. ಅನುಪಮಾ ಅವರಿಗೆ ನನ್ನ ಮಾತು ಇಷ್ಟ ಆಗಲಿಲ್ಲ. ಕೊಂಚ ಬೇಸರ ಮಾಡಿಕೊಂಡ್ರು. ಹೇಳದೆ ನನಗೂ ಬೇರೆ ದಾರಿ ಇರಲಿಲ್ಲ.

ಎಚ್.ಎಸ್.ರಾಘವೇಂದ್ರರಾವ್ ಅವರೊಂದಿಗೆ ನನಗೆ ಜಗಳ ಇರೋದು ಇದಕ್ಕಾಗಿಯೆ. ನನ್ನ ಆತ್ಮೀಯ ಗೆಳೆಯ ಅವರು. ಅವರಿಗೆ ಹೇಳಿದೆ, 'ನಿಮ್ಮನ್ನು ಆಳವಾಗಿ ತಟ್ಟದ ಕೃತಿಯ ಬಗ್ಗೆ ಯಾಕೆ ಬರೆಯುವಿರಿ. ಇದರಿಂದ ನಿಮಗೆ ಉಪಯೋಗ ಏನಿದೆ?' ಅಂತ. ಹಾಗೆ ಬರೆದಾಗ ಬರೆಸಿಕೊಂಡವರು ಕೂಡ ಬೆಳೆಯೋದಿಲ್ಲ. ಒಂದು ಕೃತಿ ಹಾಂಟ್ ಮಾಡದೇ ಇದ್ರೆ ಬರೆಯೋದು ಯಾಕೆ? ಇದನ್ನ ಎಚ್‌ಎಸ್‌ಆರ್ ಮಾತ್ರ ಬರೆದಿದ್ದಾರೆ ಅಂತ ಅಲ್ಲ. ಅನೇಕರು ಹೀಗೆ ಬರೆದಿದ್ದಾರೆ. ನಾನು ಕೂಡ ಕೆಲವೊಮ್ಮೆ ಬರೆದಿರಬಹುದು. ತೋರಿಕೆಯ ಮಾತುಗಳನ್ನು ನಾವೆಲ್ಲ ಬರೆದಿರಬಹುದು. ಒಮ್ಮೆ ಡಿ.ಆರ್. ನಾಗರಾಜ್ ಅವರು ಜಿ.ಎಸ್. ಶಿವರುದ್ರಪ್ಪನವರ ಕವಿತೆಗಳ ಕುರಿತು ಬರೆದಿದ್ರು. ನಮ್ಮ ಗುಂಪಿನಲ್ಲಿಯೇ ಯಾರೊ ಒಬ್ರು 'ಅವೆಲ್ಲ ಸಿಂಪಲ್ ಕವಿತೆಗಳು' ಅಂದ್ರು. ಅದಕ್ಕೆ ಡಿ.ಆರ್. ಹೇಳಿದ್ದೇನಂದ್ರೆ, 'ಏ ಬಿಟ್ಹಾಕಯ್ಯ ಅದನ್ನ. ನನ್ನ ವಿಮರ್ಶೆ ಹೇಗಿದೆ ಹೇಳು?' ಅಂತ. ನಾನು ಕೇಳಿಕೊಳ್ತಾ ಇರೋದೇನಂದ್ರೆ, ಆ ಕೃತಿ ನನಗೆ ನೋಡೋದನ್ನ ಕೂಡ ಕಲಿಸಬೇಕಲ್ಲವೆ. ನನ್ನ ವಿಮರ್ಶೆಯೇ ಮುಖ್ಯ ಅಂತಾದ್ರೆ ಹೇಗೆ? ಎಷ್ಟೋ ಸಲ ವಿಮರ್ಶೆಯಲ್ಲಿ ಏನಾಗ್ತದೆ ಅಂತಂದ್ರೆ, ಗೊತ್ತಿದ್ದೋ ಗೊತ್ತಿಲ್ಲದೆಯೋ ಕೆಲ ಅಂಶಗಳನ್ನು ಮುಚ್ಚಿಟ್ಟು ಕೂಡ ಬರೆದಿರಬಹುದು. ಇತ್ತೀಚಿಗೆ ಎಚ್.ಎಸ್. ಶಿವಪ್ರಕಾಶ್ ಅವರಿಗೆ ನಾನೊಂದು ಮುನ್ನುಡಿ ಬರೆದೆ. ಅದರೊಳಗೆ ಒಂದು ಸಾಲು ಇದೆ. ಅದು ಬರೆದಾದ ಮೇಲೆ ನಾನು ತುಂಬಾ ಡಿಸ್ಟರ್ಬ್ ಆದೆ. ಅವರು ಡಿಸ್ಟರ್ಬ್ ಆದರೋ ಇಲ್ಲವೋ ಗೊತ್ತಿಲ್ಲ. ಓದಿದವರು ಯಾರಾದರೂ ಗಮನಿಸಿದಾರೋ ಇಲ್ವೋ ಅದೂ ಗೊತ್ತಿಲ್ಲ. ನಲವತ್ತು ವರ್ಷಗಳಲ್ಲಿ ಅವರು ಬರೆದಿರೋ ಕವಿತೆಗಳೊಳಗೆ ನಾಲ್ಕೈದು ಸಾಲುಗಳನ್ನ ಬಿಟ್ರೆ ಮತ್ತೆ ಮರಳಿ ನೆನಪಿಸಿಕೊಳ್ಳಬಹುದಾದ ಸಾಲುಗಳಿಲ್ಲ. ಆ ಮ್ಯಾಜಿಕಲ್ ಎಂಚ್ಯಾಂಟಿಂಗ್ ಇರುತ್ತದಲ್ಲ ಅದು. ರಾಮಚಂದ್ರ ಶರ್ಮ ಅವರದೊಂದು ಸಾಲು ಇದೆ ನೋಡಿ: 'ಸುಮಕೆ ಸೌರಭ ಬಂದ ಗಳಿಗೆ ಯಾವುದು' ಅಂತ. ಅನೇಕ ಸಲ ನೆನಪಾಗ್ತದೆ ನನಗೆ. ಅಂದ್ರೆ ಒಂದು ರೀತಿಯಲ್ಲಿ ನಿಮ್ಮನ್ನು ಬೆನ್ನುಬಿಡದೆ ಹಿಂಬಾಲಿಸ್ತಿರ್ತದೆ. ಅದಿಲ್ಲ ಇಲ್ಲಿ. ಶಿವಪ್ರಕಾಶ್ ಅವರ 'ಏಸು ಕಾವಿತ್ತವ್ವ ನೆಲದೊಳಗೆ' ಸಾಲು ಮತ್ತೆ ಮತ್ತೆ ನೆನಪಾಗ್ತದೆ. ಈ ಏಸು ಅನ್ನೋ ಪದಕ್ಕೆ ಕಿ.ರಂ. ನಾಗರಾಜ್ ಅವರು ಕ್ರಿಶ್ಚಿಯಾನಿಟಿ ಅಂತ